# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಸದಸ್ಯರ ಹೆಸರು** | : | **ಡಾ. ತಳವಾರ್ ಸಾಬಣ್ಣ<br>(ನಾಮ ನಿರ್ದೇಶನ ಹೊಂದಿದವರು)** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **126** |
| **ಉತ್ತರಿಸ ಬೇಕಾದ ದಿನಾಂಕ** | : | **14.02.2024** |
| **ಉತ್ತರಿಸ ಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು** |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಗೋ ಶಾಲೆಗಳ ನಿರ್ವಹಣೆಗೆ ವಾರ್ಷಿಕ ಎಷ್ಟು ಅನುದಾನ ಒದಗಿಸಲಾಗುತ್ತಿದೆ;<br>(ವಿವರ ನೀಡುವುದು)</td><td>2023-24ನೇ ಸಾಲಿನಲ್ಲಿ ಸರ್ಕಾರಿ ಗೋ ಶಾಲೆಗಳ ನಿರ್ವಹಣೆಗಾಗಿ ಲೆಕ್ಕ ಶೀರ್ಷಿಕೆ:2403-00-102-2-40 ರಡಿ ಒಟ್ಟು ರೂ.411.00 ಲಕ್ಷ ಅನುದಾನವನ್ನು ಕೆಳಕಂಡ ವಿವರದಂತೆ ಒದಗಿಸಲಾಗಿದೆ.
<table>
<tr><th>ಕ್ರ ಸಂ</th><th colspan="2">ಉಪ ಲೆಕ್ಕ ಶೀರ್ಷಿಕೆಗಳು</th><th>ನಿಗದಿಯಾದ ವಾರ್ಷಿಕ ಅನುದಾನ</th><th>ಕಾರ್ಯಕ್ರಮ</th></tr>
<tr><td>1</td><td>059</td><td>ಇತರೆ ಖರ್ಚುಗಳು</td><td>100.00</td><td>ಗೋಶಾಲೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ವಸ್ತುಗಳಿಂದ ಗೋಉತ್ಪನ್ನಗಳನ್ನು ತಯಾರಿಸುವ ಗೋಶಾಲೆಗಳಿಗೆ ಯಂತ್ರೋಪಕರಣಗಳು / ಸಲಕರಣೆಗಳನ್ನು ಖರೀದಿಸಲು ಸಹಾಯಧನ ಹಾಗೂ ಸರ್ಕಾರಿ ಗೋಶಾಲೆಗಳ ಅಭಿವೃದ್ಧಿ ಹಾಗೂ ಪುಣ್ಯಕೋಟಿ ದತ್ತು ಯೋಜನೆ ಪ್ರಚಾರ ಪಡಿಸುವುದು.</td></tr>
<tr><td>2</td><td>103</td><td>ಸಹಾಯಾನುದಾನ ಸಾಮಾನ್ಯ</td><td>311.00</td><td>ಸರ್ಕಾರಿ ಗೋಶಾಲೆಗಳ ನಿರ್ವಹಣೆಗಾಗಿ</td></tr>
</table>
</td></tr>
<tr><td>ಆ</td><td>ರಾಜ್ಯದಲ್ಲಿ ಸರ್ಕಾರದ ಅನುದಾನ ಪಡೆಯುವ ಗೋ ಶಾಲೆಗಳೆಷ್ಟು;<br>(ವಿವರ ನೀಡುವುದು)</td><td>2023-24ನೇ ಸಾಲಿನಲ್ಲಿ 30 ಸರ್ಕಾರಿ ಗೋಶಾಲೆಗಳು ಸರ್ಕಾರದ ಅನುದಾನ ಪಡೆಯುತ್ತಿವೆ. <u>ಅನುಬಂಧ-1</u>ರಲ್ಲಿ ನೀಡಿದೆ.<br><br>ಪುಣ್ಯ ಕೋಟಿ ದತ್ತು ಯೋಜನೆ ಅಡಿಯಲ್ಲಿ ಡಿಸೆಂಬರ್ 2023 ರ ಮಾಹೆಯಲ್ಲಿ 209 ಗೋಶಾಲೆಗಳಲ್ಲಿ 4701 ಜಾನುವಾರುಗಳನ್ನು ರೂ.2,28,25,000-00 ದೇಣಿಗೆ (ಸರ್ಕಾರಿ ಅಧಿಕಾರಿ/ನೌಕರರು ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಸಂಗ್ರಹಿಸಿದ ದೇಣಿಗೆ) ನೀಡಿ ದತ್ತು ಪಡೆಯಲಾಗಿದೆ.</td></tr>
</table>

...2

| | | |
|---|---|---|
| ಇ | ಗೋವುಗಳ ಮೇವಿನ ಕೊರತೆ ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ದಿನಾಂಕ:28-01-2024 ರ ಸಾಪ್ತಾಹಿಕ ಮೇವಿನ ವರದಿ ಅನ್ವಯ ರಾಜ್ಯದ ರೈತರ ಬಳಿ 148 ಲಕ್ಷ ಮೆಟ್ರಿಕ್ ಟನ್ ನಷ್ಟು ಮೇವಿನ ದಾಸ್ತಾನು ಇದ್ದು, ಮುಂದಿನ 27 ವಾರಗಳವರೆಗೆ ರಾಜ್ಯದ ಜಾನುವಾರುಗಳಿಗೆ ಸಾಕಾಗುವಷ್ಟು ಮೇವು ಇರುತ್ತದೆ. (ಜಿಲ್ಲಾವಾರು ಸಾಪ್ತಾಹಿಕ ಮೇವು ಲಭ್ಯತಾ ವರದಿಯನ್ನು **ಅನುಬಂಧ-2**ರಲ್ಲಿ ನೀಡಿದೆ)<br><br>ಅದಾಗ್ಯೂ, 2023-24 ನೇ ಸಾಲಿನಲ್ಲಿ ರೂ.22.00 ಕೋಟಿ ಅನುದಾನದಲ್ಲಿ, 8,17,426 ಮೇವಿನ ಬೀಜದ ಮಿನಿಕಿಟ್ ಗಳನ್ನು ರಾಜ್ಯದಲ್ಲಿ ನೀರಾವರಿ ಸೌಲಭ್ಯ ಹೊಂದಿರುವ ರೈತರಿಗೆ ಉಚಿತವಾಗಿ ಪೂರೈಸಿ ಮೇವು ಉತ್ಪಾದನೆ ಹೆಚ್ಚಿಸಲು ಕ್ರಮಕೈಗೊಳ್ಳಲಾಗಿದೆ.<br><br>ಬರಗಾಲ ಘೋಷಣೆಯಾಗಿರುವುದರಿಂದ 30 ಜಿಲ್ಲೆಗಳ ಸರ್ಕಾರಿ ಗೋಶಾಲೆಗಳಿಗೆ ಪ್ರತಿ ಗೋಶಾಲೆಯಲ್ಲಿ ಕನಿಷ್ಠ 100 ಟನ್ ಮೇವನ್ನು Buffer Stock ಆಗಿ ಸಂಗ್ರಹಿಸಿಡಲು ಪ್ರತಿ ಗೋಶಾಲೆಗೆ ರೂ.5.00 ಲಕ್ಷದಂತೆ 30 ಗೋಶಾಲೆಗಳಿಗೆ ರೂ.150.00 ಲಕ್ಷ ಅನುದಾನ ಬಿಡುಗಡೆಗೊಳಿಸಲಾಗಿದೆ. |
| ಈ | ಗೋ ಶಾಲೆಗಳಿಗೆ ಮೇವಿನ ಪೂರೈಕೆಗೆ ಎಷ್ಟು ಗೋಮಾಳಗಳನ್ನು ಬಳಸಲಾಗುತ್ತಿದೆ? (ವಿವರ ನೀಡುವುದು) | ಸರ್ಕಾರಿ ಗೋಶಾಲೆಗಳಲ್ಲಿನ ರಾಸುಗಳಿಗೆ ಬೇಕಾದ ಮೇವಿನ ಉತ್ಪಾದನೆಗಾಗಿ ಯಾವುದೇ ಗೋಮಾಳಗಳನ್ನು ಬಳಸಲಾಗಿರುವುದಿಲ್ಲ, ಆದರೆ ಸರ್ಕಾರಿ ಗೋಶಾಲೆಗಳನ್ನು ಪ್ರಾರಂಭಿಸಲು, ಜಿಲ್ಲಾಧಿಕಾರಿ / ಕಂದಾಯ ಇಲಾಖೆಯಿಂದ, ಗೋಶಾಲೆಗಳ ಹೆಸರಿಗೆ ನೀಡಲಾದ ಜಮೀನಿನಲ್ಲಿ ಲಭ್ಯತೆಗೆ ಅನುಗುಣವಾಗಿ ಮೇವಿನ ಉತ್ಪಾದನೆ ಕೈಗೊಳ್ಳಲಾಗುತ್ತಿದೆ.<br><br>ಸರ್ಕಾರಿ ಗೋಶಾಲೆಯಲ್ಲಿರುವ ಜಾನುವಾರುಗಳಿಗೆ ಬೇಕಾಗುವ ಹೆಚ್ಚುವರಿ ಮೇವನ್ನು ಪೂರೈಸಲು ಅನುದಾನ ಬಿಡುಗಡೆ ಮಾಡಲಾಗುತ್ತಿದೆ. |

**ಇ-ಪಸಂಮೀ 16 ಸಲೆವಿ 2024**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

**ಅನುಬಂಧ-I**

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆಗಳು | ಗೋಶಾಲೆ ನಿರ್ಮಾಣ, ಜಾನುವಾರುಗಳ ನಿರ್ವಹಣೆ ಮತ್ತು ಮೇವು ಸಂಗ್ರಹಣೆಗಾಗಿ ಬಿಡುಗಡೆ ಮಾಡಿದ ಅನುದಾನ |
|---|---|---|
| 1 | ಚಿಕ್ಕಮಗಳೂರು | 5.00 |
| 2 | ವಿಜಯಪುರ | 5.00 |
| 3 | ಹಾಸನ | 78.56 |
| 4 | ಬೆಂಗಳೂರು ಗ್ರಾಮಾಂತರ | 15.00 |
| 5 | ತುಮಕೂರು | 15.51 |
| 6 | ಕೋಲಾರ | 5.00 |
| 7 | ಉತ್ತರ ಕನ್ನಡ | 5.00 |
| 8 | ಕೊಡಗು | 5.00 |
| 9 | ಉಡುಪಿ | 5.00 |
| 10 | ದಕ್ಷಿಣ ಕನ್ನಡ | 15.50 |
| 11 | ಮೈಸೂರು | 15.87 |
| 12 | ಹಾವೇರಿ | 5.00 |
| 13 | ಚಾಮರಾಜನಗರ | 6.94 |
| 14 | ಬೆಳಗಾವಿ | 5.00 |
| 15 | ಬೆಂಗಳೂರು ನಗರ | 12.51 |
| 16 | ಚಿತ್ರದುರ್ಗ | 45.30 |
| 17 | ಶಿವಮೊಗ್ಗ | 5.00 |
| 18 | ಕೊಪ್ಪಳ | 5.00 |
| 19 | ದಾವಣಗೆರೆ | 5.00 |
| 20 | ಬೀದರ | 5.00 |
| 21 | ಧಾರವಾಡ | 5.00 |
| 22 | ಗದಗ | 5.00 |
| 23 | ಕಲಬುರ್ಗಿ | 5.00 |
| 24 | ಬಾಗಲಕೋಟೆ | 5.00 |
| 25 | ಚಿಕ್ಕಬಳ್ಳಾಪುರ | 5.00 |
| 26 | ಬಳ್ಳಾರಿ/ವಿಜಯನಗರ | 5.00 |
| 27 | ಮಂಡ್ಯ | 5.00 |
| 28 | ರಾಮನಗರ | 5.00 |
| 29 | ರಾಯಚೂರು | 5.00 |
| 30 | ಯಾದಗಿರ | 5.00 |
| | **ಒಟ್ಟು** | **315.19** |

Annexure-B

District wise Weekly Fodder Availability as on Dated: 28-01-2024

| Sl No. | District Name | 20 th Livestock Census of District Major Ruminants (cattle & Buffaloe) | 20 th Livestock Census of District Minor Ruminants (Sheep & Goat) | Fodder required per week. 6kg/day for Major Ruminants 0.5kg/day forMinor Ruminants | Fodder Availability (in Tons) | Fodder production in the week | Fodder utilized during the week | Total Fodder availability (in Tons) | Fodder Sufficient for weeks |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | Chitradurga | 338907 | 1737145 | 20315 | 182419 | 20917 | 20315 | 183021 | 9 |
| 2 | Mandya | 479429 | 693563 | 22563 | 276640 | 0 | 22563 | 254077 | 11 |
| 3 | Tumakuru | 574190 | 1719048 | 30132 | 386203 | 18407 | 30132 | 374478 | 12 |
| 4 | Kolara | 236162 | 577605 | 11940 | 172604 | 5350 | 11940 | 166014 | 14 |
| 5 | Kalburgi | 458756 | 558587 | 21224 | 346966 | 0 | 21224 | 325742 | 15 |
| 6 | Vijayapura | 379190 | 916168 | 19134 | 336151 | 0 | 19134 | 317017 | 17 |
| 7 | Dakshina kannada | 252401 | 32504 | 10714 | 198229 | 0 | 10714 | 187515 | 18 |
| 8 | Gadaga | 192109 | 587555 | 10125 | 185706 | 16200 | 10125 | 191781 | 19 |
| 9 | Chamarajanagara | 254722 | 279954 | 11863 | 228730 | 10229 | 11863 | 227096 | 19 |
| 10 | Uttara kannada | 410305 | 19192 | 17301 | 362978 | 0 | 17301 | 345677 | 20 |
| 11 | Udupi | 257184 | 3107 | 10812 | 237087 | 9800 | 10812 | 236075 | 22 |
| 12 | Vijayanagara | 338560 | 979426 | 17110 | 362710 | 28180 | 17110 | 373780 | 22 |
| 13 | Chikkaballapura | 230727 | 779867 | 12895 | 294961 | 5543 | 12895 | 287609 | 22 |
| 14 | Belagavi | 1393711 | 1459420 | 63644 | 1584955 | 20872 | 63644 | 1542184 | 24 |
| 15 | Bidar | 299144 | 270183 | 13510 | 343441 | 0 | 13510 | 329931 | 24 |
| 16 | Bangaluru(U) | 165029 | 145337 | 7541 | 187277 | 5455 | 7541 | 185191 | 25 |
| 17 | Dharwada | 233464 | 153938 | 10344 | 265136 | 0 | 10344 | 254792 | 25 |
| 18 | Raichure | 357794 | 940351 | 18319 | 477754 | 0 | 18319 | 459435 | 25 |
| 19 | Ramanagara | 307146 | 278118 | 13873 | 319403 | 45473 | 13873 | 351003 | 25 |
| 20 | Kodagu | 76920 | 8253 | 3260 | 99749 | 0 | 3260 | 96489 | 30 |
| 21 | Koppala | 294880 | 797945 | 15178 | 479709 | 0 | 15178 | 464532 | 31 |
| 22 | Bellary | 181426 | 591634 | 9700 | 311747 | 0 | 9700 | 302047 | 31 |
| 23 | Chikkamagaluru | 326313 | 139502 | 14195 | 471192 | 0 | 14195 | 456997 | 32 |
| 24 | Bagalakote | 457163 | 1006782 | 22725 | 810575 | 0 | 22725 | 787850 | 35 |
| 25 | Mysore | 514280 | 411669 | 22044 | 808721 | 2200 | 22044 | 788877 | 36 |
| 26 | Bangaluru (R) | 187646 | 213944 | 8630 | 329388 | 11244 | 8630 | 332002 | 38 |
| 27 | Davanagere | 329697 | 317796 | 14960 | 623298 | 0 | 14960 | 608338 | 41 |
| 28 | Yadagiri | 290774 | 693940 | 14641 | 723704 | 0 | 14641 | 709063 | 48 |
| 29 | Haveri | 346561 | 458174 | 16159 | 803477 | 0 | 16159 | 787318 | 49 |
| 30 | Shivamogga | 639216 | 102245 | 27204 | 1356554 | 0 | 27204 | 1329350 | 49 |
| 31 | Hassan | 656156 | 328445 | 28708 | 522753 | 1038368 | 28708 | 1532413 | 53 |
| | Total | 11459962 | 17201397 | 540762 | 14090218 | 1238238 | 540762 | 14787694 | 27 |